MAHAVIR M KARENNAVAR
Digitally signed by MAHAVIR M KARENNAVAR
Date: 2026.07.28 17:45:29 +0530

<u>ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಮು.ನ್ಯಾದಂ. ಬಾಗಲಕೋಟ ಇವರ ನ್ಯಾಯಾಲಯದಲ್ಲಿ</u>

ಸಿಸಿ ನಂ.291/2025

| | | |
|---|---|---|
| ಸಾಕ್ಷಿಯ ಹೆಸರು | ಃ ಅರುಣ ಜೇವರಗಿ | ಚಾಸಾ- 8 |
| ತಂದೆಯ ಹೆಸರು | ಃ ದುಂಡಪ್ಪ | ಫ್ರಾಸಾ- 4 |
| ವಯಸ್ಸು | ಃ 39 ವರ್ಷ | |
| ಉದ್ಯೋಗ | ಃ ಅ.ನಿ., ಅಉಆ ಕಚೇರಿ, ಬಾಗಲಕೋಟ | |
| ವಾಸಸ್ಥಳ | ಃ ಬಾಗಲಕೋಟೆ | |

<u>ದಿಃ 28-07-2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೊಧೀಸಲಾಯಿತು.</u>

ಮುಖ್ಯ ವಿಚಾರಣೆ ಃ ಹಿರಿಯ ಸಸಅ ರವರಿಂದ

ನಾನು ದಿಃ 02-03-2023 ರಿಂದ ಇಲ್ಲಿಯವರೆಗೆ ಬಾಗಲಕೋಟ ವಲಯದಲ್ಲಿ ಅ.ನಿ ಅಂತಾ ಕಾರ್ಯಾನಿರ್ವಹಿಸುತ್ತಿದ್ದೇನೆ.

ದಿಃ 25-07-2024 ರಂದು ಚಾಸಾ-1 ರವರಿಂದ ಕಡತ ಪಡೆದು ಪರಿಶೀಲಿಸಿ, ಅದೇ ದಿನ ಚಾಸಾ-2 ರಿಂದ 4 ರವರ ಹೇಳಿಕೆ ಪಡೆದಿರುತ್ತೇನೆ.

ದಿಃ 02-08-2024 ರಂದು ಚಾಸಾ-5 ರವರ ಮೂಲಕ ರಾಸಾಯನಿಕ ಪರೀಕ್ಷೆಗೆ ಸ್ಯಾಂಪಲಗಳನ್ನು ಎಫ್ ಎಸ್ ಎಲ್, ಧಾರವಾಡಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದಿಃ 03-08-2024 ರಂದು ರಾಸಾಯನಿಕ ವರದಿಯನ್ನು ಹಾಗೂ ಚಾಸಾ-5 ರವರ ಹೇಳಿಕೆಯನ್ನು ಕೊಟ್ಟಿದ್ದು, ಅದನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿಃ 23-08-2024 ರಂದು ಕೃತ್ಯ ನಡೆದ ಜಾಗೆಯ ಉತಾರೆ ಪೂರೈಸಲು ಪಿ.ಡಿ.ಓ ಸಿಗಿಕೇರಿ ಇವರಿಗೆ ಪತ್ರ ಬರೆದಿರುತ್ತೇನೆ. ದಿಃ 25.09.2024 ರಂದು ಸದರಿ ಅಧಿಕಾರಿಗಳಂ ಆರೋಪಿಯ ಹೆಸರಿನಲ್ಲಿ ಯಾವುದೇ ಮನೆ ದಾಖಲು ಆಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ.

ದಿಃ 05-10-2024 ರಂದು ಈ ಪ್ರಕರಣದ ಆರೋಪಿಯ ಪತ್ತೆಗಾಗಿ ಚಾಸಾ.5 ಇವರಿಗೆ ಜ್ಞಾಪನಾ ಪತ್ರ ಹೊರಡಿಸಿರುತ್ತೇನೆ. ದಿಃ 22.10.2024 ರಂದು, ದಿಃ 04-12-2024 ಮತ್ತು ದಿಃ 20.01.2025 ರಂದು ಮತ್ತು ದಿಃ 13.03.2025 ರಂದು ಸದರಿ ಆರೋಪಿಯ ಪತ್ತೆಗಾಗಿ ಹೋಗಿದ್ದು ಆರೋಪಿತರು ಪತ್ತೆಯಾಗಿಲ್ಲವೆಂದು ತಮ್ಮ ವರದಿ ನೀಡಿದ್ದು ಅವುಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಆರೋಪಿಯು ಪ್ರಕರಣ ದಾಖಲಾದಾಗಿನಿಂದ ತಲೆಮರೆಸಿಕೂಂಡಿದ್ದರಿಂದ ಆತನ ವಿರುದ್ಧ ವಾರಂಟ ಹೊರಡಿಸಲು ವಿನಂತಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತೇನೆ.

ಪಿ ಎಫ್ ನ್ನು ನಿಪಿ-12 ಎಂದು, ನನ್ನ ಸಹಿಯನ್ನು ನಿಪಿ-12 ಎ ಎಂದು, ಎಫ್ ಎಸ್ ಎಲ್ ಕಚೇರಿಗೆ ಬರೆದ ಪತ್ರವನ್ನು ನಿಪಿ-13, ನನ್ನ ಸಹಿಯನ್ನು ನಿಪಿ-13 ಎ ಎಂದು, ಎಫ್ ಎಸ್ ಎಲ್ ವರದಿ ನಿಪಿ-14, ನನ್ನ ಸಹಿಯನ್ನು ನಿಪಿ-14 ಎ ಎಂದು, ಪಿಡಿಓ ಸಿಗಿಕೇರಿ ರವರಿಗೆ ಬರೆದ ಪತ್ರವನ್ನು ನಿಪಿ-15, ನನ್ನ ಸಹಿಯನ್ನು ನಿಪಿ-15 ಎ ಎಂದು, ಸದರಿ ಪಿಡಿಓ ಇವರು ನೀಡಿದ ಹಿಂಬರಹವನ್ನು ನಿಪಿ-16, ನನ್ನ ಸಹಿಯನ್ನು ನಿಪಿ-16 ಎ ಎಂದು ಗುರುತಿಸಲಾಯಿತು. ಚಾಸಾ-5 ಇವರು ನೀಡಿದ ವರದಿಗಳು ನಿಪಿ-4 ರಿಂದ 8 ರಲ್ಲಿ ಇರುತ್ತವೆ, ಅವುಗಳನ್ನು ಸ್ವೀಕರಿಸಿದ ಬಗ್ಗೆ ಇರುವ ನನ್ನ ಸಹಿಗಳನ್ನು ನಿಪಿ-4 ಬಿ ರಿಂದ 8 ಬಿ ಎಂದು ಗುರುತಿಸಲಾಯಿತು. ಅದೇ ರೀತಿ ನಿಪಿ-9 ರಲ್ಲಿರುವ ನನ್ನ ಸಹಿಯನ್ನು ನಿಪಿ-9 ಬಿ ಎಂದು ಗುರುತಿಸಲಾಯಿತು.

ಈ ಪ್ರರಕಣದಲ್ಲಿ ಜಪ್ತಾದ ಮುದ್ದೆಮಾಲು ಮುಮಾ-1 ರಂತೆ ಇರುತ್ತವೆ.

ಪಾಟೀಸವಾಲು ಃ ಆರೋಪಿತರ ಪರ ಶ್ರೀ ಕೆ ಹೆಚ್ ಎಲ್ ವಕೀಲರಿಂದ.

ಪ್ರಕರಣದ ಕಡತ ಪಡೆದ ನಂತರ ನಾನು ಗುನ್ನೆ ಜಾಗೆಗೆ ಭೇಟಿ ನೀಡಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಸಾರ್ವಜನಿಕರ ಹೇಳಿಕೆಗಳನ್ನು ದಾಖಲಿಸಲು ಪ್ರಯತ್ನ ಮಾಡಿದೇನು ಆದರೆ ಯಾರೊಬ್ಬರೂ ಸಹ ಸ್ಪಂದಿಸಿರುವುದಿಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವಸ್ತುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಲ್ಲ ಮತ್ತು ವರದಿ ಪಡೆದಿಲ್ಲ ಎಂದರೆ ಸರಿಯಲ್ಲ. ಪಂಚರುಗಳು ಬೇರೆ ಬೇರೆ ಸಹಿಗಳನ್ನು ಮಾಡಿದ್ದ ಮಾದರಿಯನ್ನು ನಾನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ್ದೇನು.

ನಿಪಿ-1 ಮತ್ತು 2 ರಲ್ಲಿರುವ ಶಿವಾನಂದ ಕೊರಡ್ಡಿ ಎನ್ನುವ ಸಾಕ್ಷಿದಾರರ ಸಹಿಗಳು ಬೇರೆ ಬೇರೆ ಇರುತ್ತವೆ ಎಂದರೆ ನಿಜ ಆದರೆ ಅದೇ ವ್ಯಕ್ತಿ ಬೇರೆ ಬೇರೆಯಾಗಿ ಸಹಿ ಮಾಡಿರಬಹುದು ಎಂದು ನಾನು ಹೇಳುತ್ತೇನೆ. ನಿಪಿ-1 ರಲ್ಲಿ ಮತ್ತು ರಾಸಾಯನಿಕ ವರದಿಯ ಕುರಿತು ಕಳುಹಿಸಿಕೊಟ್ಟಿರುವ ಸಹಿಗಳಲ್ಲಿಯೂ ಸಹ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ.

ಚಾಸಾ-8, ಫ್ರಾಸಾ-4

ನಾನು ಆರೋಪಿತರ ಪತ್ತೆಗಾಗಿ ಚಾಸಾ-5 ಇವರನ್ನು ನೇಮಕ ಮಾಡಿ ಜ್ಞಾಪನ ಪತ್ರ ಹೊರಡಿಸಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಇಲಾಖಾ ಅಂಕಿ-ಅಂಶಗಳಿಗಾಗಿ ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ ಹಾಗೂ ಮುದ್ದೆಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.
ನನ್ನ ಸಮಕ್ಷಮ,

(ಮಹಾವೀರ ಮ. ಕರೆಣ್ಣವರ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಮು.ನ್ಯಾದಂ. ಬಾಗಲಕೋಟೆ.